ಓ ಎಸ್ ನಂ. 12/2021

ಪಿ ಡಬ್ಲ್ಯೂ: 1

ದಿನಾಂಕ 29-03-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2ನೇ ಪ್ರತಿವಾದಿ ಪರಃ ಎಜಿಪಿ ರವರಿಂದಃ

ದಾವೆ ಹೂಡುವ ಮೊದಲು ನಾನು 2ನೇ ಪ್ರತಿವಾದಿಗೆ ನೋಟೀಸು ನೀಡಿದ್ದೆ ಎಂದರೆ ನಿಜ. ಸದರಿ ನೋಟೀಸಿನಲ್ಲಿ ನೀವು ರಸ್ತೆ ಅಗಲೀಕರಣಕ್ಕಾಗಿ ನಿಮ್ಮ ಆಸ್ತಿ ಒತ್ತುವರಿಯಾಗಿದೆ ಎಂದು ಹೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪೈಪು ಲೈನ್ ಸಲುವಾಗಿ ಒತ್ತುವರಿಯಾಗಿದೆ ಎಂದು ನುಡಿದಿರುತ್ತಾರೆ. 2ನೇ ಪ್ರತಿವಾದಿಗೆ ನಾನು ನೀಡಿದ್ದ ನೋಟಿಸಿಗೆ ಅವರು ಉತ್ತರ ನೀಡಿದ್ದರು ಎಂದರೆ ನಿಜ. ದಾವಾ ಆಸ್ತಿಯು ಪುರಸಭಾ ವ್ಯಾಪ್ತಿಗೆ ಬರುತ್ತದೆ ಎಂದರೆ ನಿಜ. ಪೈಪು ಲೈನನ್ನು ಪುರಸಭೆಯವರು ಹಾಕುತ್ತಾರೆ ಎಂದರೆ ಸರಿಯಲ್ಲ. ನಾನು ನೀಡಿದ್ದ ನೋಟಿಸಿಗೆ 2ನೇ ಪ್ರತಿವಾದಿಯು ಪ್ಯಾರಾ ನಂ.೫ ರಲ್ಲಿ ವಿವರವಾಗಿ ತಿಳಿಸಿರುತ್ತಾರೆ ಎಂದರೆ ನಿಜ. 3ನೇ ಪ್ರತಿವಾದಿಯು ರಸ್ತೆಯ ಅಗಲೀಕರಣ ಗುತ್ತಿಗೆದಾರರು ಎಂದರೆ ನಿಜ.

ದಾವೆಯಲ್ಲಿ ನಾನು ಒತ್ತುವರಿ ಜಾಗವನ್ನು ತೆರೆವುಗೊಳಿಸಿಕೊಡುವಂತೆ ಪರಿಹಾರ ಕೇಳಿರುತ್ತೇನೆ ಎಂದರೆ ನಿಜ. ದಾವಾ ಆಸ್ತಿಯಲ್ಲಿ ಪೈಪು ಲೈನು ಇರುವುದರಿಂದ ತೆಗೆಯುವಂತೆ ಕೇಳಿರುತ್ತೇನೆ. ಪೈಪು ಲೈನನ್ನು ಸರ್ಕಾರಿ ಜಾಗದಲ್ಲಿ ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಜಾಗದಲ್ಲಿ ಅಳವಡಿಸಲಾಗಿದೆ ಎಂದು ನುಡಿದಿರುತ್ತಾರೆ. ಪೈಪು ಲೈನ್ ಅಳವಡಿಕೆಗೂ 2ನೇ ಪ್ರತಿವಾದಿಗೂ ಯಾವುದೇ ಸಂಬಂದ ಇಲ್ಲ ಅದು

ಪುರಸಭೆಯವರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇಬ್ಬರಿಗೂ ಸಂಬಂಧಿಸಿದ್ದು ಎಂದು ನುಡಿದಿರುತ್ತಾರೆ. ವಿನಾಕಾರಣ 2ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3ನೇ ಪ್ರತಿವಾದಿ ಪರಃ</u>**

3ನೇ ಪ್ರತಿವಾದಿ ಪರ ವಕೀಲರು ಮತ್ತು 3ನೇ ಪ್ರತಿವಾದಿ ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರದನ್ಯಾದಂ., ಕಡೂರು.**